ಶ್ರೀ ಹೆಚ್.ಡಿ. ದೇವೇಗೌಡ : ಬೇಕಾದರೆ ಸದನ ಎಲ್ಲಾ ಸದಸ್ಯರನ್ನು ಕರೆದುಕೊಂಡು ಹೋಗುವುದಕ್ಕೆ ಸಿದ್ದನಿದ್ದೇನೆ. ಅಲ್ಲಿರತಕ್ಕಂತಹ ಪರಿಸ್ಥಿತಿಯನ್ನು ಅವರು ಕಣ್ಣಿನಿಂದ ನೋಡಲಿ ನಾವು ಬೇಕೆಂದು ತಡ ಮಾಡುತ್ತಿಲ್ಲ. ಇಡೀ ಸಾಯಿಲ್ ಕ್ಯಾರೆಕ್ಟರ್ ಯಾವ ತರಹ ಇದೆ, ಅಲ್ಲಿ ಏನಾಗಿದೆ ಸೊನ್ನೆ ಪಾಯಿಂಟ್‌ನಿಂದ ಉದ್ದಕ್ಕೆ ಬಂದಿದೆ. ನಾನು ನೋಡಿಕೊಂಡು ಬಂದಿದ್ದೇನೆ. ಎಲ್ಲಾ ಕುಸಿದು ಬಿದ್ದು ಹೋಗುತ್ತಿದೆ. ಲೈನಿಂಗ್ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ, ಯಾವ ಇಂಜಿನಿಯರ್ ಇದ್ದಾರೂ ಮಾಡುವುದಕ್ಕಾಗುವುದಿಲ್ಲ. ಭೂಮಿಯ ಗುಣ ಹಾಗೆ ಇದೆ. ಆದ್ದರಿಂದ ಒಂದು ಕಡೆ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಕಳುಹಿಸಿ, ನಾನು ಸ್ಥಳ ಪರಿಶೀಲನೆ ಮಾಡಿದ ಮೇಲೆ, ಅದನ್ನು ಹಾಗೆ ಶಾಶ್ವತವಾಗಿ ನೀರು ಬರುವ ಹಾಗೆ ಮಾಡಬಹುದು ಎಂಬುವುದನ್ನು ನಿರ್ಧರಿಸುತ್ತೇವೆ. ಸುಮ್ಮನೆ ನಾಲೆ ಮಾಡಿಕೊಂಡು ಹೋದರೆ ಮತ್ತೆ ಕುಸಿದು ಬಿದ್ದು ಹೋದರೆ ಮತ್ತೆ ಏನೂ ಮಾಡುವುದಕ್ಕಾಗುವುದಿಲ್ಲ ನೀರು ತುಮಕೂರಿನವರೆಗೂ ಬರುವುದಿಲ್ಲ, ಇಲ್ಲಿಯವರೆಗೂ ಬರುವುದಿಲ್ಲ. ಹತ್ತಾರು ಕಡೆ ಬಿದ್ದು ಹೋಗಿದೆ. ಜೊತೆಗೆ ಹೋಗೋಣ ಇಲ್ಲಿ ಯಾವುದೇ ಮುಚ್ಚುಮರೆ ಇಲ್ಲ. 4-6 ಜನ ಯಾರಾದರು ನನ್ನ ಜೊತೆ ಬಂದರೆ ಹೋಗಿ ಇನ್‌ಸ್ಪೆಕ್ಷನ್ ಮಾಡೋಣ. ಅದರಲ್ಲಿ ಏನೂ ಇಲ್ಲ. We are trying to complete the work as early as possible. ಒಳಗೆ ಮಾಡಬೇಕೆಂದು ಹೇಳಿದ್ದಾರೆ, ವರ್ಕ ಪೂರ್ಣಗೊಳ್ಳಬೇಕಾದರೆ ತನ್ನದೇ ಆದ ಕೆಲವು ಸಮಸ್ಯೆಗಳು ಇವೆ.

ಶ್ರೀ ಎಸ್. ನಂಜಮರಿ : ಸನ್ಮಾನ್ಯ ಅಧ್ಯಕ್ಷರೆ, ಹಿಂದೆ ಈಚನೂರು ಕೆರೆಯಿಂದ ತಿಪಟೂರಿಗೆ ಕುಡಿಯುವ ನೀರು ಕೊಡುತ್ತೇವೆಂದು ಹೇಳಿ ಮುಖ್ಯ ಮಂತ್ರಿಗಳು ಬಂದು ಅಲ್ಲಿ ನೋಡಿಕೊಂಡು ಬಂದಿದ್ದರು. ತಿಪಟೂರಿನಲ್ಲಿ 60,000 ಜನಸಂಖ್ಯೆ ಇದೆ. ಆದರೆ 15 ದಿವಸ ಆದರೂ ಕುಡಿಯುವುದಕ್ಕೆ ನೀರು ಬಿಡುತ್ತಿಲ್ಲ, 12-15 ದಿವಸಕ್ಕೆ ಒಂದು ಸಾರಿ ನೀರು ಬಿಡುತ್ತಿದ್ದಾರೆ. ಈಚನೂರು ಕೆರೆ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದಾರೆ, ಕೆಲಸ ನಿಂತು ಅದರ ಮಾಹಿತಿಯನ್ನು ತರಿಸಿಕೊಂಡು ನೋಡಿ, ಅದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ಹೇಳಿ.

ಶ್ರೀ ಹೆಚ್.ಡಿ. ದೇವೇಗೌಡ : ಅದರಲ್ಲಿ ಹಿಂದೆ ಹೋಗುವ ಪ್ರಶ್ನೆ ಇಲ್ಲ. ಸರ್ಕಾರ ಹಿಂದೆ ತೀರ್ಮಾನ ಮಾಡಿದೆ, ತಿಪಟೂರಿನಿಂದ ಅರಸೀಕೆರೆವರೆಗೆ ನೀರು ಕೊಡಬೇಕೆಂದು ಮೊದಲು 1987-88ರಲ್ಲಿ ನಾನೇ ಬಡ್ಜೆಟ್‌ನಲ್ಲಿ ಹಾಕಿದ್ದೆ ಅದರಿಂದ ಮಂಜೂರಾತಿ ಕೊಡುವುದಕ್ಕೆ ಆಗಲಿಲ್ಲ. ನಾನು ರಾಜೀನಾಮೆ ಕೊಟ್ಟು ಹೋದೆ. ಆ ಕೆಲಸ ನಿಲ್ಲಿಸುವ ಪ್ರಶ್ನೆ ಇಲ್ಲ. ಆದರೆ ದರ ಪ್ರಗತಿಯ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಅದು ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನವರು ನಡೆಸತಕ್ಕಂತದ್ದು. ನೀವು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶಿಗ್ಗಾಂವ್ ತಾಲ್ಲೂಕಿನಲ್ಲಿ 10ನೇ ಕೆ.ಎಸ್.ಆರ್.ಪಿ ಬೆಟಾಲಿಯನ್ ಪ್ರಾರಂಭ.

65 - ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಗೃಹ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿಗ್ಗಾಂವ್ ತಾಲ್ಲೂಕಿನಲ್ಲಿ 10ನೇ ಕೆಎಸ್ಆರ್‌ಪಿ ಬೆಟಾಲಿಯನ್ ಮಂಜೂರಾಗಿ ಎಷ್ಟು ದಿವಸಗಳಾದವು ?

ಆ) ಸದರಿ ಬೆಟಾಲಿಯನ್ ಪ್ರಾರಂಭಿಸಲು 99 ಎಕರೆ ಜಮೀನನ್ನು ಪೋಲೀಸ್ ಇಲಾಖೆಗೆ ವಶಪಡಿಸಿಕೊಳ್ಳಲಾಗಿದೆಯೇ ?

ಇ) ಸದರಿ ಬೆಟಾಲಿಯನ್ನನ್ನು ಪ್ರಾರಂಭಿಸಲು ವಿಳಂಬವಾಗಿರಲು ಕಾರಣಗಳೇನು ?

ಈ) ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಸರ್ಕಾರಿ ಆಜ್ಞೆ ಸಂಖ್ಯೆ ಹೆಚ್‌ಡಿ 136 ಪಿಒಪಿ 93 ದಿನಾಂಕ 16-9-93ರಲ್ಲಿ 10ನೇ ಪಡೆಯನ್ನು ಶಿಗ್ಗಾಂವ್‌ದಲ್ಲಿ ಸ್ಥಾಪಿಸಲು ಮಂಜೂರಾತಿ ಆಗಿರುತ್ತದೆ.

ಆ) ಸರ್ಕಾರಿ ಆಜ್ಞೆ ಸಂಖ್ಯೆ ಆರ್‌ಡಿ 98 ಎಲ್‌ಎಸ್‌ಡಿ 93 ದಿನಾಂಕ 2-8-94ರ ಪ್ರಕಾರ 97.29 ಎಕರೆ ಜಮೀನು ಹಂಚಿಕೆಯಾಗಿರುತ್ತದೆ.

ಇ) ಅ) ಸದರಿ ಬೆಟಾಲಿಯನ್‌ಗೆ ಸ್ಥಾಪನೆಗೆ ಬೇಕಾಗುವ ಕಟ್ಟಡ, ವಾಹನ ಮತ್ತು ಇತರೆ ಉಪಕರಣಗಳ ಹಾಗೂ ಸೌಲಭ್ಯಗಳಿಗೆ ಬೇಕಾದ ಅನುದಾನ ಇಲ್ಲದೆ ಇರುವುದರಿಂದ ಪ್ರಾರಂಭಿಸಲು ವಿಳಂಬವಾಗಿರುವುದು.

ಆ) ಅದಲ್ಲದೆ ಆ ಬೆಟಾಲಿಯನ್ಗೆ ಬೇಕಾದ ಸಿಬ್ಬಂದಿಯ ನೇಮಕಾತಿ ಕೆಲಸ ಇನ್ನೂ ಪೂರ್ಣಗೊಂಡಿಲ್ಲ. ಈ ನೇಮಕಾತಿಯ ವಿಷಯದಲ್ಲಿ, ಕೆಲವು ಕಾನೂನಿನ ಮತ್ತು ಆಡಳಿತಾತ್ಮಕ ಅಡಚಣೆಗಳು ಇದ್ದುದರಿಂದ, ನೇಮಕಾತಿಯಲ್ಲಿ ವಿಳಂಬವಾಗಿರುತ್ತದೆ.

ಈ) ಅ) ನೇಮಕಾತಿಯ ವಿಷಯದಲ್ಲಿ ಬಂದಿರುವ ಅಡಚಣೆಗಳನ್ನು ನಿರಾರಿಸಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಆ) ಅನುದಾನ ಬಿಡುಗಡೆಯ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಶಿಗ್ಗಾಂವಿಗೆ 10ನೇ ಕೆ.ಎಸ್.ಆರ್.ಪಿ. ಬೆಟಾಲಿಯನ್ ದಿನಾಂಕ 16.9.93ರಂದು ಮಂಜೂರಾಗಿದೆ ಎಂದು ತಿಳಿಸಿದ್ದಾರೆ. ಮತ್ತು ಬೆಟಾಲಿಯನ್‌ಗೆ ಬೇಕಾಗತಕ್ಕಂತಹ 97 ಎಕರೆ 29 ಗುಂಟೆ ಜಮೀನನ್ನು ಕೂಡ ವಶಪಡಿಸಿಕೊಂಡಿರುವುದಾಗಿ ತಿಳಿಸಿದ್ದಾರೆ. ಆದರೆ ಇನ್ನು ಅನುದಾನ ದೊರಕಿಲ್ಲ ಮತ್ತು ಶಿಗ್ಗಾವಿಯಲ್ಲಿ ಕಟ್ಟಡ ಹಾಗೂ ಇತರೆ ಸೌಲಭ್ಯಗಳು ದೊರಕಿಲ್ಲ ಆದಕಾರಣ ಇನ್ನು ಮಾಡಲಿಲ್ಲ ಎನ್ನತಕ್ಕಂತಹ ಉತ್ತರವನ್ನು ಹೇಳಿದ್ದಾರೆ. ಆದರೆ, 1993ರಲ್ಲಿ ಮಂಜೂರಾಗಿದ್ದು ಈವರೆಗೆ ಅನುದಾನ ಇಲ್ಲ ಎಂದರೆ ಇದು ಒಂದು ರಾಜಕೀಯ ಸರ್ಕಾರಗಳು ಬದಲಾವಣೆ ಆಗಿರುವುದರಿಂದ ಅಲ್ಲಿ ಮಾಡುತ್ತಿಲ್ಲ ಎನ್ನತಕ್ಕಂತಹ ಅನುಮಾನ ಜನತೆಗೆ ಬಂದಾಗಿದೆ. ಆ ಕಾರಣ ಕೂಡಲೇ ತಾವು ಅನುದಾನವನ್ನು ದೊರಕಿಸಿಕೊಂಡು ತಾವು ಬೆಟಾಲಿಯನ್‌ನ್ನು ಪ್ರಾರಂಭ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

11.30 ಎ.ಎಂ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದರಲ್ಲಿ ರಾಜಕೀಯ ಏನೂ ಇಲ್ಲ. ಇದು 1996ರಲ್ಲಿ ಮಂಜೂರಾಗಿದೆ. ಮಂಜೂರಾತಿ ಬರೀ ಪೇಪರ್‌ನಲ್ಲಿ ಆಗಿದೆ. 1993ರಲ್ಲಿ ಅನುದಾನ ಇರಲಿಲ್ಲ. 1994ರಲ್ಲಿ ಅನುದಾನ ಇರಲಿಲ್ಲ.10ನೇ ಬೆಟಾಲಿಯನ್ ನಾವು ರೈಸ್ ಮಾಡಬೇಕಾದರೆ ರಿಕ್ರೂಟಮೆಂಟ್ ಆಗಬೇಕು. ರಿಕ್ರೂಟಮೆಂಟ್‌ನಲ್ಲಿ ಬಹಳಷ್ಟು ತಪ್ಪುಗಳು ಆಗಿವೆ ಎಂದು ಎನ್‌ಕ್ವಾಯರಿ ಕಮಿಟಿಯನ್ನು ಮಾಡಿದ್ದಾರೆ. ಅಡ್ಮಿನಿಸ್ಟ್ರೇಟಿವ್ ಟ್ರಿಬೂನಲ್‌ದಿಂದ ಅದಕ್ಕೆಲ್ಲಾ ಸ್ಟೇಗಳನ್ನು ಕೊಟ್ಟಿದ್ದಾರೆ. ಹೈಕೋರ್ಟ್‌ದಿಂದ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಮೂರು ಸಾವಿರ ಜನಕ್ಕೆ ಅಪಾಯಿಂಟ್‌ಮೆಂಟನ್ನು ಮಾಡಬೇಕಾಗಿದೆ. ಆದರೆ ಮಾಡುವುದಕ್ಕಾಗುತ್ತಿಲ್ಲ. ಲೀಗಲ್ ಲಿಟಿಗೇಶನ್ಸ್ ಇರುವುದರಿಂದ ಈಗ ನಾವು ಅವರನ್ನು ರಿಕ್ರೂಟಮೆಂಟ್ ಮಾಡುವುದಕ್ಕಾಗುತ್ತಿಲ್ಲ. ಹೀಗಾಗಿ ನಾವು ಇನ್ನೂ ಕೆಲಸ ಮಾಡುವುದಕ್ಕಾಗಿಲ್ಲ. ಆದರೆ ನಮ್ಮ ಅಡ್ಮಿನಿಸ್ಟ್ರೇಟಿವ್ ಆಫ್ ವ್ಯೂದೇ ಬಹಳ ಬೇಕಾಗಿರತಕ್ಕಂತದ್ದು. ನಾನು ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಈ ರಾಜಕೀಯದು ಏನು ಸಮಸ್ಯೆ ಇಲ್ಲ. ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಮಂಜುನಾಥ ಸಿ. ಕುನ್ನೂರು : ತಾವು ದಯವಿಟ್ಟು ತೀವ್ರವಾಗಿ ಇದನ್ನು ಮಾಡಬೇಕು. ಉಚ್ಚ ನ್ಯಾಯಾಲಯದಲ್ಲಿ ಯಾವುದೇ ವ್ಯಾಜ್ಯಗಳು ಪೆಂಡಿಂಗ್ ಇಲ್ಲ. ಕೆ.ಎ.ಟಿ.ಗೆ ಏನೋ ರಿಸರ್ವೇಶನ್ ಪಾಯಿಂಟ್ ಆಫ್ ವ್ಯೂದಿಂದ ಹೊಗುತ್ತಾರೆಂದು ಕೇಳಿದ್ದೇವೆ. ಹೆಚ್ಚಿನ ಅನುದಾನವನ್ನು ಕೇಳಿದ್ದರು. ತಾವು ಮಾಡಿದ್ದೀರಿ. ಮಾನ್ಯ ಅಧ್ಯಕ್ಷರೇ, ಅಲ್ಲಿ ಒಬ್ಬ ಅಧ್ಯಕ್ಷರನ್ನು ಹಾಕಿದ್ದಾರೆ. 1993ರಿಂದ 1996ರವರೆಗೆ ಮೂರು ವರ್ಷ ಪಗಾರ ತೆಗೆದುಕೊಂಡಿದ್ದಾರೆ. ಗ್ರಾಮಾಂತರ ಪ್ರದೇಶವಾದುದರಿಂದ ಅವರು ಅಲ್ಲಿ ಹೋಗಿ ಇರುವುದಕ್ಕೆ ತಯಾರಾಗಿಲ್ಲ. ಅವರು ಬೆಂಗಳೂರು, ಮಂಗಳೂರು, ಗುಲ್ಬರ್ಗಾ ಇಂತಹ ಸಿಟಿಯೊಳಗೆ ಬೆಟಾಲಿಯನ್ ಮಾಡಿಕೊಂಡು ಇರಬೇಕು ಎಂದು. ಅದು ಸೂಕ್ಷ್ಮ ಪ್ರದೇಶ ಅವಶ್ಯಕತೆ ಇದೆ ಎಂದು ಇಲಾಖೆಯ ಅಭಿಪ್ರಾಯದ ಮೇರೆಗೆ ಅಲ್ಲಿ ಮಂಜೂರಾತಿ ಮಾಡಿದೆ. ಆದಕಾರಣ ದಯವಿಟ್ಟು ಇದನ್ನು ತಾವು ಅರ್ಥ ಮಾಡಿಕೊಂಡು ಇದನ್ನು ಮಾಡಬೇಕೆಂದು ತಮ್ಮನ್ನು ಮತ್ತೊಮ್ಮೆ ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ 1993-94ಕ್ಕೆ ಏನು ನಡೆಯಿತು ಎಂದು ನಾನು ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಅನುದಾನ ಇರಲಿಲ್ಲ. ರಿಕ್ರೂಟ್‌ಮೆಂಟ್‌ನಲ್ಲಿ ಬೇಕಾದಷ್ಟು ರೂಲ್ಸನ್ನು ವಯೊಲೇಟ್ ಮಾಡಿದ್ದಾರೆಂದು ಇರುವ ಸಂದರ್ಭದಲ್ಲೇ ಎನ್‌ಕ್ವಾಯರಿಗೆ ಆರ್ಡರ್ ಮಾಡಿರತಕ್ಕಂತಹದ್ದು. ನಮ್ಮ ಸರ್ಕಾರ ಬಂದ ಮೇಲೆ ಮಾಡಿಲ್ಲ. ರಿಕ್ರೂಟ್‌ಮೆಂಟ್ ಬಗ್ಗೆ ಹೈಕೋರ್ಟ್ ಮತ್ತು ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್‌ಗೆ ಹೋಗಿದ್ದಾರೆಂದು ನಾನು ಹೇಳಿರತಕ್ಕಂತದ್ದು. ಇಷ್ಟು ಭರವಸೆ ಕೊಡುತ್ತೇನೆ. ನಾನು. ಎಲ್ಲಿ ಮಾಡಬೇಕು? ಯಾವಾಗ ಮಾಡಬೇಕು? ಯಾವ ರೀತಿ ಮಾಡಬೇಕು It is purely administrative matter. ನಾವು ಡಿಸಿಷನ್ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಆರ್. ಪಾಟೀಲ್ : ಕೆ.ಎಸ್.ಆರ್.ಪಿ.ಯ ಅಲ್ಲಿ ಏನಾದರು ಸಮಸ್ಯೆ ಇದ್ದರೆ ಬಿಜಾಪುರ ಜಿಲ್ಲೆ ಸಹಿತ ಕೋಮು ಗಲಭೆಯಿಂದ ತತ್ತರಿಸಿ ಹೋಗಿರುವುದರಿಂದ ಕೇಳುತ್ತೇನೆ.

ಅಧ್ಯಕ್ಷರು : ಪಾಪ ಕುನ್ನೂರವರು ಒದ್ದಾಡುತ್ತಿದ್ದರೆ ಬಿ.ಆರ್. ಪಾಟೀಲ್‌ರವರು ಪ್ರಾಣ ತೆಗೆಯುತ್ತಿದ್ದಾರೆ.

ಶ್ರೀ ಮಂಜುನಾಥ ಸಿ. ಕುನ್ನೂರು. ಮಾನ್ಯ ಅಧ್ಯಕ್ಷರೇ, ಈಗ ಮತ್ತೇ 11ನೇ ಬಟಾಲಿಯನ್ ಮಾಡುತ್ತಿದ್ದಾರೆ. ಬೇಕಾದರೆ ಅದನ್ನು ಅವರಿಗೆ ಕೊಡಲಿ. ಆದರೆ ಹತ್ತನೆಯ ಬಟಾಲಿಯನ್ ಎಲ್ಲಿ ಮಂಜೂರು ಆಗಿದೆ. ಅಲ್ಲೇ ಮಾಡಲಿ. ಈಗ ಸಚಿವರು ಹೇಳಿದಂತೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ನೆಪದಲ್ಲಿ ರಾಜಕೀಯ ಮಾಡುತ್ತಿದ್ದಾರೆ.

ಅಧ್ಯಕ್ಷರು : ಕುನ್ನೂರವರೇ, ಅಗತ್ಯವಿಲ್ಲ. ಇದು ಪ್ರಶ್ನೋತ್ತರ ವೇಳೆ ಸಮಯ ವ್ಯಯವಾಗುತ್ತದೆ.

ಸರ್ಕಾರಿ ಉದ್ಯೋಗದಲ್ಲಿ ಮಹಿಳೆಯರಿಗೆ ಮೀಸಲಾತಿ.

66 - ಶ್ರೀಮತಿ ಪ್ರಮೀಳಾ ನೇಸರ್ಗಿ(ಚಾಮರಾಜಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಉದ್ಯೋಗದಲ್ಲಿ ಮಹಿಳೆಯರಿಗೆ ಶೇಕಡ 25ರಷ್ಟು ಮೀಸಲಾತಿಯನ್ನು ಎಂದಿನಿಂದ ಜಾರಿಗೆ ತರಲಾಗಿದೆ.

ಆ) ಹಾಗಿದ್ದಲ್ಲಿ, ಈ ನಿಯಮಗಳನ್ನು ಪಾಲಿಸಲಾಗುತ್ತಿದೆಯೇ?

ಇ) ಈ ನಿಯಮ ಜಾರಿಗೆ ಬಂದ ನಂತರ ವಿವಿಧ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆಗಳನ್ನು ಹೊರಡಿಸುವ ಸಂದರ್ಭದಲ್ಲಿ ಮಹಿಳೆಯರಿಗೆ ಮೀಸಲಾತಿ ಮಾಡದಿರುವ ಇಲಾಖೆಗಳ ಬಗ್ಗೆ ಕೈಗೊಳ್ಳಲಿರುವ ಕ್ರಮವೇನು?

ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ರಾಜ್ಯ ಸಿವಿಲ್ ಸೇವೆಗಳಿಗೆ ನೇರ ನೇಮಕಾತಿಯಲ್ಲಿ ಶೇಕಡ 30 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಕಾದಿರಿಸಲು ತೀರ್ಮಾನಿಸಲಾಗಿದೆ. ಜಾರಿಯಲ್ಲಿರುವ ನಿಯಮಗಳಿಗೆ ತಿದ್ದುಪಡಿ ಮಾಡಲು ಕರಡು ನಿಯಮಗಳನ್ನು ಹೊರಡಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಸಭಾಧ್ಯಕ್ಷರೆ, ಇದನ್ನು ಯಾವಾಗ ಜಾರಿಗೆ ತರುತ್ತೀರೆಂದು ನಾನು ಕೇಳಿದ್ದೇನೆ. ಕರಡು ನಿಯಮಗಳನ್ನು ಹೊರಡಿಸಲಾಗಿದೆ ಎಂದು ಹೇಳಿದ್ದೀರಿ ತಾವು. ಈಗ ಮಹಿಳೆಯರಿಗೆ ಶೇಕಡಾ ಮೂವತ್ತರಷ್ಟು ಕೊಡುತ್ತೇವೆಂದು ಹೇಳಿದ್ದೀರಿ. ಈಗ ಕೆ.ಪಿ.ಎಸ್.ಸಿ.ನಲ್ಲಿ ಸಂದರ್ಶನಗಳು ನಡೆಯುತ್ತಿವೆ. ನಾನು ಕೇಳಿದ ಪ್ರಕಾರ ಅವರು ಈಗ ಶೇಕಡಾ 30 ರಷ್ಟು ಕೊಡುವುದಕ್ಕೆ ತಯಾರಿಲ್ಲ. ಏಕೆ ಎಂದು ಕೇಳಿದರೆ ಇನ್ನೂ ಆಗಿಲ್ಲ ಎಂದು ಹೇಳುತ್ತಾರೆ. ಅಂದರೆ